## ಚಿಂತಾಮಣಿ ಕೊಡ್ಲೆಕೆರೆ ಅವರ ಎರಡು ಕಥೆಗಳು

# ದೇವಿಯ ಪಾತ್ರ

ಕಲೆ: ರಾಮಕೃಷ್ಣ ಸಿದ್ರಪಾಲ

ದಕ್ಷಿಣ ಭಾರತದ ಬಹುತೇಕ ಎಲ್ಲ ಭಾಷೆಗಳಲ್ಲೂ ನಟಿಸಿರುವ ತಾರೆ ಆಶಾದೇವಿ ತನ್ನ ಅಭಿನಯ ಮತ್ತು ಚೆಲುವಿನಿಂದ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವುದರಲ್ಲಿ ಅಚ್ಚರಿ ಏನೂ ಇಲ್ಲ. ಕರ್ನಾಟಕದ ಕರಾವಳಿ ತೀರದ ಶ್ರೀಕ್ಷೇತ್ರವೊಂದರಲ್ಲಿ ಅವಳ ಅಭಿಮಾನಿ ಇರುವನೆಂದೂ, ಅವನ ಪತ್ರಗಳಿಗೆ ಅವಳು ಉತ್ತರಿಸುವುದುಂಟೆಂದೂ ಕೇಳಿದರೆ ಮಾತ್ರ ಆಶ್ಚರ್ಯ ಅನ್ನಿಸಬಹುದು. ಒಬ್ಬ ಸಿನಿಮಾ ನಟಿಗೆ ಒಂದಷ್ಟು ಪತ್ರಗಳು, ಅವುಗಳಲ್ಲಿ ಬಹುಪಾಲು ಪ್ರೇಮಪತ್ರಗಳು, ಅಭಿಮಾನ ಪೂರ್ವಕವಾಗಿ ಬರೆದಂತೆ ಕಾಣುವ ಪ್ರೇಮಾಂತರ್ಗತ ಪತ್ರಗಳು ಬರುವುದು ಸಹಜ. ಅವುಗಳ ನಡುವೆ ಈ ಅಭಿಮಾನಿಯ ಪತ್ರ ತನ್ನ ವಿಲಕ್ಷಣತೆಯಿಂದಾಗಿ ನಟಿಯ ಗಮನ ಸೆಳೆಯುತ್ತಿತ್ತು. ಆಗಾಗ ತಮ್ಮೂರಿನ ದೇವಿಯ ಪ್ರಸಾದವನ್ನೂ ಕೂಡ ಈ ಅಭಿಮಾನಿಯು ಕಳುಹಿಸುತ್ತಿದ್ದ. ಪ್ರತಿಯಾಗಿ ದೇವರ ಸೇವೆಗೆಂದು ಇವಳೂ ಹಣ ಕಳುಹಿಸುತ್ತಿದ್ದಳು. ಇವಳ ಚಲನಚಿತ್ರ ಬಿಡುಗಡೆಯಾದ ಕೆಲವು ವಾರಗಳಲ್ಲಿ ಈ ಅಭಿಮಾನಿಯು ಚಿತ್ರದಲ್ಲಿ ಇವಳ ಪಾತ್ರವನ್ನು ವಿಮರ್ಶಿಸಿ ಪತ್ರ ಬರೆಯುತ್ತಿದ್ದ. ಅವಳ ಸೌಂದರ್ಯದ ಅಭಿಮಾನಿಯೂ ಆದುದರಿಂದ ಇಂತಿಂಥ ದೃಶ್ಯಗಳಲ್ಲಿ, ಇಂತಿಂಥ ಡ್ರೆಸ್ಸುಗಳಲ್ಲಿ ಅವಳು ಅಂದವಾಗಿ ಕಾಣುವಳೆಂದೂ, ಇಂತಿಂಥ ಸಂದರ್ಭಗಳಲ್ಲಿ ಅವಳು ಧರಿಸಿದ (ಧರಿಸದ!) ಬಟ್ಟೆಗಳು ಅಸಹ್ಯ ಹುಟ್ಟಿಸುತ್ತಿದ್ದವು ಎಂದೂ ಬರೆಯುತ್ತಿದ್ದ. ಅನೇಕ ಸಲ ಆಶಾ ನಕ್ಕು ಸುಮ್ಮನಾಗುತ್ತಿದಳು. ಶುರುವಿನಲ್ಲಿ ಅವನ ಪತ್ರಗಳನ್ನು ಆಶಾ ಲಕ್ಷ್ಯಕ್ಕೆ ತಂದುಕೊಂಡಿರಲಿಲ್ಲ. ಆದರೆ ಕೆಲ ದಿನಗಳು ಕಳೆದಂತೆ ಅವನ ಪತ್ರಗಳಲ್ಲಿ ಒಂದು ಬಗೆಯ ವಿಶೇಷ ಆಕರ್ಷಣೆ ಉಂಟಾಗತೊಡಗಿತು. ಯಾರಾದರೂ ಹೇಳಲು ಸಂಕೋಚಪಡಬಹುದಾದ ಸಂಗತಿಗಳನ್ನೂ ನಿರ್ದಾಕ್ಷಿಣ್ಯವಾಗಿ ಈತ ಹೇಳುತ್ತಿದ್ದ. ಕೆಲವು ನಟರ ಹೆಸರನ್ನು ನೇರವಾಗಿ ಬರೆದು ಇಂಥ ಮಂಗಗಳ ಜೊತೆ ಕಾಣಿಸಿಕೊಳ್ಳಬೇಡಿ, ನಿಮಗೂ ಅವರಿಗೂ ಎಲ್ಲಿಯ ಹೋಲಿಕೆ? ನೀವು ನಿಮ್ಮ ಮಟ್ಟ ಉಳಿಸಿಕೊಳ್ಳಬೇಕು ಇತ್ಯಾದಿ ಬರೆದು ಮುಜುಗರ ಉಂಟು ಮಾಡುತ್ತಿದ್ದ. ಏಕೆಂದರೆ, ಅವಳ ಮುಂದಿನ ಆರೇಳು ಚಿತ್ರಗಳು ಆ ನಾಯಕರ ಜೊತೆಗೇ ಇದ್ದವು!

ಹೀಗೆಲ್ಲ ಈ ಅಭಿಮಾನಿ ಪತ್ರ ಬರೆಯುತ್ತ ಹತ್ತು ವರ್ಷಗಳೇ ಕಳೆದವಾದರೂ ಆಶಾಗೆ ಅವನನ್ನು ನೋಡುವ ಅವಕಾಶ ಸಿಗಲಿಲ್ಲ. ಆತನಂತೂ ಅವಳನ್ನು ಖುದ್ದಾಗಿ ನೋಡುವ ಆಸೆ ತೋಡಿಕೊಂಡಿದ್ದಿಲ್ಲ. ಅವನ ಬದುಕಿನ ಮಟ್ಟವೋ, ಕಷ್ಟವೋ ಅವನ್ನೆಲ್ಲ ಅವಳು ತಿಳಿಯುವುದಾದರೂ ಹೇಗೆ? ಮತ್ತು ಯಾಕೆ? ಆಶಾಳ ಜೀವನದ ಲಕ್ಷ್ಯವೇ ಬೇರೆ. ಅವಳ ಎಷ್ಟೋ ಅಭಿಮಾನಿಗಳಲ್ಲಿ ಒಬ್ಬನಾದ ಆತ ಅವಳನ್ನು ಅದೆಷ್ಟೋ ಬಾರಿ ಕೆಣಕುತ್ತಿದ್ದ, ಇರಿಸು ಮುರಿಸು ಉಂಟುಮಾಡುತ್ತಿದ್ದ. ಆದುದರಿಂದ ಅವನ ಪತ್ರಗಳನ್ನು ಪ್ರತ್ಯೇಕವಾಗಿ ತೆಗೆದಿರಿಸುವಂತೆ ಸಹಾಯಕರಿಗೆ ಸೂಚನೆ ನೀಡಿದ್ದಳು. ಇತ್ತೀಚಿನ ವರ್ಷಗಳಲ್ಲಿ ಮೊಬೈಲ್ ಬಂದ ಬಳಿಕ ಎಷ್ಟೋ ಸಲ ಅವನ ಎಸ್.ಎಂ.ಎಸ್.ಗಳು ಎಲ್ಲೆಲ್ಲೋ ಇದ್ದಾಗ ಹಠಾತ್ತನೆ ಬಂದೆರಗಿದಂತೆ ಅವಳಿಗೆ ಕಾಣುವುದಿದೆ. ಆದರೂ ತಿವಿವಂತೆ ಬರೆವ ಅವನ ಸಂದೇಶಗಳನ್ನು ಕುತೂಹಲದಿಂದ ಕಾಯುತ್ತಾಳೆ. ಅವಳು ರಾಜಕೀಯಕ್ಕೆ ಇಳಿವ ಸುದ್ದಿ ಹರಡಿದಾಗ 'ನಿಮ್ಮಂಥ ಅವಿವೇಕಿಗಳು ರಾಜಕೀಯಕ್ಕೆ ಬಂದರೆಷ್ಟು, ಬಿಟ್ಟರೆಷ್ಟು? ನಿಮ್ಮ ಕೆಲಸ ನೀವು ಮಾಡಿ' ಎಂದು ಬರೆದು ಅವಳಿಗೆ ಬೆವರಿಳಿಸಿಬಿಟ್ಟಿದ್ದ. ಫೋನಿನಲ್ಲಿ ಮಾತನಾಡುತ್ತಿದ್ದುದು ಕಡಿಮೆ. ಯಾವುದೋ ಪೂಜೆಯಲ್ಲೋ ಜಪದಲ್ಲೋ ಇದ್ದೆನೆಂದು ಆಮೇಲೆ ಸಂದೇಶ ಕಳಿಸುತ್ತಿದ್ದ. ತನ್ನ ಮಗಳ ಮದುವೆ ಹೊತ್ತಿಗೆ ಮಾತ್ರ ಒಮ್ಮೆ ಹಣ ಕಳಿಸಲು ಕೋರಿಕೊಂಡಿದ್ದು ಬಿಟ್ಟರೆ ವೈಯಕ್ತಿಕವಾಗಿ ಏನನ್ನೂ ಕೇಳಲಿಲ್ಲ. ಆ ಹಣವನ್ನೂ ಕೆಲವು ವರ್ಷಗಳ ಬಳಿಕ ವಾಪಸು ಕೊಟ್ಟು ಆಶಾಗೆ ಆಶ್ಚರ್ಯ ಹುಟ್ಟಿಸಿದ್ದ. ಅವಳೇನೂ ಆ ಹಣವನ್ನು ಸಾಲವಾಗಿ ಕೊಟ್ಟಿರಲಿಲ್ಲ.

ಅವಳಿರುವ ಚಿತ್ರರಂಗದಲ್ಲಿ ಚಿರಯೌವನವೊಂದು ಪರಮಮೌಲ್ಯ. ಅವಳ ಅದೃಷ್ಟ ದೊಡ್ಡದು. ವರ್ಷಗಳು ಕಳೆದರೂ ಅವಳ ಚೆಲುವು ಮಾಸಿಲ್ಲ. ಆ ಕುರಿತು ಯಾರಾದರೂ ಮೆಚ್ಚುಗೆಯ ಮಾತನಾಡಿದಾಗ ಆಶಾ ಸಂತೋಷ ಪಡುವುದು ಸಹಜ. ಆದರೂ ವಯಸ್ಸು ತನ್ನನ್ನು ಒಳಗೊಳಗೇ ಹಣ್ಣು ಮಾಡುತ್ತಿರುವುದೂ ನಿಜವಷ್ಟೆ? ಸಾಕುಮಗಳೊಬ್ಬಳನ್ನು ಬಿಟ್ಟರೆ ಇನ್ನಾರೂ ತನ್ನವರೆಂಬುವರಿಲ್ಲ ಅಂದುಕೊಳ್ಳುವಾಗಲೆಲ್ಲ ಈ ಅಭಿಮಾನಿ ಸುಮ್ಮಸುಮ್ಮನೇ ನೆನಪಾಗುತ್ತಾನೆ. ಇವನಿಗೆ ಇದಕ್ಕೆಲ್ಲ ಉತ್ತರ ಗೊತ್ತಿರಬಹುದೆ? ಯಾರ್‍ಯಾರ ಬಳಿಯೋ ಅಂತರಂಗ ಬಿಚ್ಚಿಡಲು ಸಾಧ್ಯವೆ? ಎಂದು ಆಶಾ ಅವನ ಬಳಿ ಮಾತನಾಡದಿರಲು ನಿರ್ಧರಿಸುವಳು.

ಆದರೆ ವಾಸ್ತವದಲ್ಲಿ ಅವಳು ಎಷ್ಟೊಂದು ಬಗೆಯ ಪಾತ್ರಗಳನ್ನು ನಿರ್ವಹಿಸಿದ್ದಾಳೆ! ಹಠಮಾರಿಯಾಗಿ, ಸಮಾಜಸೇವಕಿಯಾಗಿ, ಚೆಲ್ಲಾಟದ ಚೆಲುವೆಯಾಗಿ, ಹೋರಾಟಗಾರ್ತಿಯಾಗಿ, ಹಳ್ಳಿಯ ಮುಗ್ಧ ಹೆಣ್ಣಾಗಿ, ಆಧುನಿಕ ಕಾಲದ ಉದ್ಯೋಗಸ್ಥ ಮಹಿಳೆಯಾಗಿ, ವಿಚ್ಛೇದಿತಳಾಗಿ, ಎಂಥ ಅಗ್ನಿದಿವ್ಯದಲ್ಲೂ ದಾಂಪತ್ಯವನ್ನೊಂದು ಮೌಲ್ಯ ಎಂದು ಕಾದಿಟ್ಟುಕೊಂಡು ಬಂದ ಪತ್ನಿಯಾಗಿ... ಆದರೆ ತನ್ನದೇ ಜೀವನದಲ್ಲಿ ತನ್ನ ಪಾತ್ರ ಏನೆಂದು ಆಶಾಗೆ ಸ್ಪಷ್ಟವಾಗುತ್ತಿಲ್ಲ. ಇದಕ್ಕೆ ಸಂಭಾಷಣೆ, ಚಿತ್ರಕಥೆ, ನಿರ್ದೇಶನ ಎಲ್ಲವೂ ನನ್ನದೇ ಇರಬೇಕು! ಆದರೆ ಪಾತ್ರ ಯಾವುದು?

ಇಂಥದೊಂದು ಒದ್ದಾಟ ಒಳಗೆ ನಡೆಯುತ್ತಿರುವಾಗಲೇ ರಾಯಕರ ಎಂಬ ನಿರ್ಮಾಪಕ ಒಂದು ದಿನ ಅವಳನ್ನು ಕಂಡು 'ದೇವೀ ಮಹಾತ್ಮೆ' ಎಂಬ ಚಲನಚಿತ್ರದಲ್ಲಿ ಅವಳು ದೇವಿಯಾಗಿ ಪಾತ್ರ ವಹಿಸಬೇಕು, ಇಂಥದೊಂದು ಪೌರಾಣಿಕ ಮಾದರಿಯ ಚಲನಚಿತ್ರದಲ್ಲಿ ಅವಳು ಇದುವರೆಗೆ ಪಾತ್ರ ವಹಿಸಿಯೇ ಇಲ್ಲ. ಇದೊಂದು ಹೊಸ ಇಮೇಜನ್ನೇ ತಂದುಕೊಡಬಲ್ಲುದು ಎಂದು ಆಶಾಳನ್ನು ಒಂದೇ ಸವನೆ ಒತ್ತಾಯಿಸತೊಡಗಿದರು. ಆಶಾಗೋ ಈ ಪಾತ್ರ ವಹಿಸಲು ಏಕೋ ಮನಸ್ಸಾಗುತ್ತಿಲ್ಲ. ಈ ದೇವಿಯ ಪಾತ್ರ, ಅದರ ವೇಷ ಭೂಷಣಗಳು, ಪಠ್ಯಪುಸ್ತಕ ಮಾದರಿಯ ಉದ್ದುದ್ದ ಸಂಭಾಷಣೆಗಳು... ನೆನೆಯುತ್ತಿದ್ದಂತೆ ಎಲ್ಲವೂ ಕಿರಿಕಿರಿ ಹುಟ್ಟಿಸತೊಡಗಿದವು. ತನ್ನ ಜೊತೆ ಈಗ ಅಭಿನಯಿಸುತ್ತಿರುವ ಅನೇಕ ನಟ–ನಟಿಯರು ಈ ಪೌರಾಣಿಕ ಕಾಸ್ಟ್ಯೂಮ್‌ಗಳೊಳಗೆ ಹೇಗೆ ಕಾಣಿಸಿಕೊಂಡಾರೆಂದು ನೆನೆದು ನಗತೊಡಗಿದಳು. ರಾಯಕರರಿಗೆ ಕಿರಿಕಿರಿ ಉಂಟಾಗತೊಡಗಿತು. ತಾನು ಇನ್ನೊಮ್ಮೆ ತಮ್ಮ ನಿರ್ದೇಶಕರೊಡನೆ ಬಂದು ಕಾಣುವುದಾಗಿ ಹೇಳಿ ರಾಯಕರ ಹೊರಟರು.

ಇಳಿಮುಖವಾಗತೊಡಗಿದ್ದ ತನ್ನ ಜನಪ್ರಿಯತೆಯನ್ನು ಮತ್ತೆ ಮೇಲಕ್ಕೆ ತರಲು ಯಾವುದಾದರೊಂದು ಜಾದೂ ನಡೆಯಬೇಕಿತ್ತು. ಇದೇ ಆ ಮ್ಯಾಜಿಕ್ಕಾಗಿರಬಾರದೇಕೆ? ಆದರೂ... ನಾನು ದೇವಿಯ ಪಾತ್ರ ನಿರ್ವಹಿಸಬಲ್ಲೆನೆ? ದೇವರನ್ನು ಅವನ(ಳ) ಪಾಡಿಗೆ ದೇವರಕೋಣೆಯಲ್ಲಿಟ್ಟು ಕಾಲ ಕಳೆದ ತಾನು ಇದೀಗ ದೇವಿಯ ಪಾತ್ರ ವಹಿಸಿ ಖಡ್ಗ ಹಿಡಿದು ನಿಲ್ಲುವುದು! ದಾನವರ ರಕ್ತ ಬಗೆಯುವುದು! ರುಂಡಮಾಲೆಗಳನ್ನು ಧರಿಸುವುದು! ಭಯ, ಆಕರ್ಷಣೆ, ಅನುಮಾನ, ಒಂದು ಆಹ್ವಾನ... ಹುಲು ಮಾನವಳಾದ ನಾನು ದೇವಿಯಾಗುವುದು! ಈ ಚೆಲುವು ಆ ದೇವಿಯ ಒಂದು ಅಂಶವೇ ಇದ್ದೀತು, ಅದೂ ಅಳಿಯುತ್ತ ಬಂದಿರುವ ಈ ಹೊತ್ತಿನಲ್ಲಿ ನಾನು ದೇವಿಯಾಗುವುದು! ದೈವಿಕತೆಗೆ ಯಾವ ಲೆಕ್ಕದಲ್ಲೂ ಸಂಬಂಧವಿರದೇ ಬದುಕಿಬಂದಿದ್ದೇನೆ. ಎಷ್ಟೋ ಸಲ ದೇವರ ಲೆಕ್ಕದಲ್ಲಿ ತಪ್ಪಿಯೂ ನಡೆದಿರಬೇಕು!

ನಾನು ದೇವಿಯಾಗುವುದು!

ಅದ್ದೂರಿ ತಾರಾಗಣ, ಕೋಟ್ಯಂತರ